## 2015 ಕ.ತೀ.ವ 20

### ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಡಿ.ಹೆಚ್. ವಘೇಲಾ
### ಮತ್ತು
### ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ

**ಶ್ರೀ ಶಿವಕುಮಾರ್ –ವಿರುದ್ಧ–ಯೂನಿಯನ್ ಆಫ್ ಇಂಡಿಯಾ, ಪ್ರತಿನಿಧಿಯಾಗಿ ಕಾನೂನು ಮತ್ತು ನ್ಯಾಯ ಮಂತ್ರಾಲಯದ ಕಾರ್ಯದರ್ಶಿ ಹಾಗೂ ಇತರರು***

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ವಿವಾಹ ವಿಚ್ಛೇದನ ಅಧಿನಿಯಮ, 1869

ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮ, 1869–ಪ್ರಕರಣ 10–ಎ–ಪರಸ್ಪರ ಸಮ್ಮತಿಯಿಂದ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸುವ ಮುಂಚೆ ಪ್ರತ್ಯೇಕವಾಗಿ ಜೀವಿಸುವ ಅವಧಿಯಾಗಿ ಎರಡು ವರ್ಷಗಳ ಅವಧಿಯನ್ನು ನಿಗದಿಪಡಿಸುವುದು ತಾರತಮ್ಯದಿಂದ ಕೂಡಿದೆಯೇ ಮತ್ತು ಭಾರತ ಸಂವಿಧಾನದ 14 ಮತ್ತು 21ನೇ ಅನುಚ್ಛೇದದ ಉಲ್ಲಂಘನೆಯಾಗಿದೆಯೇ ಎಂಬುದು ಇಲ್ಲಿಯ ವಿವಾದಾಂಶವಾಗಿದೆ. 10–ಎ ಪ್ರಕರಣದಲ್ಲಿ ಇರುವ ''ಎರಡು ವರ್ಷಗಳು'' ಎಂಬ ಪದಾವಳಿಯನ್ನು ''ಒಂದು ವರ್ಷ'' ವೆಂದು ಅರ್ಥೈಸುವಂತೆ ನ್ಯಾಯಾಲಯವನ್ನು ಕೋರಿ ಅರ್ಜಿದಾರರು ಸಲ್ಲಿಸಿದ ಕೋರಿಕೆಯನ್ನು ''ಸೌಮ್ಯ ಆ್ಯನ್ ಥಾಮಸ್–ವಿರುದ್ಧ–ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು– 2010 (1) ಕೆಎಲ್‌ಟಿ 869'' ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಚರ್ಚಿಸಿ, ನಿರ್ಣಯಿಸಲಾಗಿದೆ. ಸೌಮ್ಯ ಆ್ಯನ್ ಥಾಮಸ್ ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯದ ತೀರ್ಪು ಮತ್ತು ಕುಸುಮ್ ಇಂಗಾಟ್ಸ್ & ಅಲಾಯ್ಸ್ ಲಿಮಿಟೆಡ್ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು, ಅಧಿನಿಯಮದ 10–ಎ(1) ಪ್ರಕರಣವು ಸಂವಿಧಾನದ 14 ಮತ್ತು 21ನೇ ಅನುಚ್ಛೇದಗಳನ್ನು ಉಲ್ಲಂಘಿಸಿದ್ದು, ಅದು ಅಸಂವಿಧಾನಾತ್ಮಕವಾದುದಾಗಿದೆಯೆಂದು ನಿರ್ಣಯಿಸಿದೆ. ಆದರೆ, ಅಸಂವಿಧಾನಾತ್ಮಕತೆಯ ಕುಣಿಕೆಯಿಂದ ಅದನ್ನು ಉಳಿಸುವುದಕ್ಕೆ ಅಧಿನಿಯಮದ 10–ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ 'ಎರಡು ವರ್ಷಗಳು' ಎಂಬ

*ರಿಟ್ ಅರ್ಜಿ ಸಂ. 13112/2012 (ಜಿಎಂ–ಆರ್‌ಇಎಸ್–ಪಿಐಎಲ್), ದಿನಾಂಕ: 03ನೇ ಫೆಬ್ರವರಿ, 2014.

**ಪದಾವಳಿಯನ್ನು 'ಒಂದು ವರ್ಷ'ವೆಂದು ಅರ್ಥೈಸಬೇಕಾಗುತ್ತದೆ. ಕೇಂದ್ರ ಅಧಿನಿಯಮದ ಒಂದು ಉಪಬಂಧದ ಸಂವಿಧಾನಾತ್ಮಕತೆಯ ಬಗ್ಗೆ ಕೇರಳ ಉಚ್ಚ ನ್ಯಾಯಾಲಯದ ಘೋಷಣೆಯು ಭಾರತದಾದ್ಯಂತ ಅನ್ವಯವಾಗುತ್ತದೆ. ಇದನ್ನು ಕುಸುಮ್ ಇಂಗಾಟ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್ ಮೊಕದ್ದಮೆಯಲ್ಲಿ ವಿಶ್ಲೇಷಿಸಿದ್ದು, ಸಂಸದೀಯ ಅಧಿನಿಯಮದ ಸಂವಿಧಾನಾತ್ಮಕತೆಯನ್ನು, ಸಂವಿಧಾನದ 226ನೇ ಅನುಚ್ಛೇದದ (2)ನೇ ಖಂಡದಲ್ಲಿ ಒಳಗೊಂಡಿರುವ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಶ್ನಿಸಿದ ರಿಟ್ ಅರ್ಜಿಯ ಕುರಿತಾಗಿ ಹೊರಡಿಸಲಾದ ಆದೇಶವು, ಅದು ಅಂತಿಮವಾದುದಾಗಿರಲಿ ಅಥವಾ ಮಧ್ಯಂತರವಾದುದಾಗಿರಲಿ, ಅಧಿನಿಯಮದ ಅನ್ವಯಿಕೆಯ ಅವಧಿಗೊಳಪಟ್ಟ ಭಾರತದ ಒಕ್ಕೂಟದಾದ್ಯಂತ ಪರಿಣಾಮವನ್ನು ಹೊಂದುತ್ತದೆಂದು ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟಪಡಿಸಿದೆ. – ಭಾರತ ಸಂವಿಧಾನ–226ನೇ ಅನುಚ್ಛೇದದ (2)ನೇ ಖಂಡ – ಚರ್ಚಿಸಲಾಗಿದೆ.**

**(ಪ್ಯಾರಾ–7)**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

1. *2010 (1) ಕೆಎಲ್‌ಟಿ 869: ಐಎಲ್‌ಆರ್ 2010 (1) ಕೇರಳ 805*
   *ಸೌಮ್ಯ ಆ್ಯನ್ ಥಾಮಸ್ –ವಿರುದ್ಧ–*
   *ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು (ಉಲ್ಲೇ) 3*
2. *ಎಐಆರ್ 2004 ಎಸ್‌ಸಿ 2321*
   *ಕುಸುಮ್ ಇಂಗಾಟ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್*
   *–ವಿರುದ್ಧ– ಯೂನಿಯನ್ ಆಫ್ ಇಂಡಿಯಾ*
   *ಮತ್ತು ಇನ್ನೊಬ್ಬರು (ಉಲ್ಲೇ) 3*

ಅರ್ಜಿದಾರರ ಪರ : ಶ್ರೀಮತಿ ಆರತಿ ಮುಂಡ್ಕೂರ್ – ನ್ಯಾಯವಾದಿ;
1ನೇ ಎದುರುದಾರರ ಪರ : ಶ್ರೀಮತಿ ಸಿಂಚನ –ನ್ಯಾಯವಾದಿ
ಶ್ರೀ ಎಸ್. ಕಲ್ಯಾಣ್ ಬಸವರಾಜ್ – ಎಎಸ್‌ಜಿ ಪರವಾಗಿ
2ನೇ ಎದುರುದಾರರ ಪರ : ಶ್ರೀಮತಿ ನಿಲೋಫರ್ ಅಕ್ಬರ್ – ಎ.ಜಿ.ಎ,
3ನೇ ಎದುರುದಾರರ ಪರ : ಶ್ರೀ ವಸಂತ್ ವಿ. ಫರ್ನಾಂಡಿಸ್ – ನ್ಯಾಯವಾದಿ.
4ನೇ ಎದುರುದಾರರ ಪರ : ನ್ಯಾಯಾಲಯ ಸಲಹೆಗಾರರಾಗಿ ಶ್ರೀ ರೂಬೆನ್ ಜ್ಯಾಕೋಬ್ – ನ್ಯಾಯವಾದಿ,
5ನೇ ಎದುರುದಾರರ ಪರ : ಶ್ರೀಮತಿ ಜಯಾನಾ ಕೊಠಾರಿ – ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ:**

1. ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸುವ ಮುಂಚೆ ಪ್ರತ್ಯೇಕವಾಗಿ ವಾಸಿಸುವ ಅವಧಿಯನ್ನು 'ಎರಡು ವರ್ಷಗಳ' ಅವಧಿಗೆ ನಿಗದಿಪಡಿಸಿರುವ ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮ, 1869 (ಸಂಕ್ಷಿಪ್ತವಾಗಿ ಅಧಿನಿಯಮ)ರ 10–3 ಪ್ರಕರಣವು ತಾರತಮ್ಯದಿಂದ ಕೂಡಿದೆ ಮತ್ತು ಸಂವಿಧಾನದ 14 ಮತ್ತು 21ನೇ ಅನುಚ್ಛೇದಗಳ ಉಲ್ಲಂಘನೆಯಾಗಿದೆಯೆಂದು ಘೋಷಿಸುವಂತೆ ಕೋರಿ ಸಾರ್ವಜನಿಕ ಹಿತಾಸಕ್ತಿಯಲ್ಲಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ. ಅಧಿನಿಯಮದ 10–ಎ ಪ್ರಕರಣದಲ್ಲಿರುವ "ಎರಡು ವರ್ಷಗಳು" ಎಂಬ ಪದಾವಳಿಯನ್ನು 'ಒಂದು ವರ್ಷ'ವೆಂದು ಅರ್ಥೈಸುವಂತೆ ಕೋರಿ ನ್ಯಾಯಾಲಯಕ್ಕೆ ಪರ್ಯಾಯ ಕೋರಿಕೆಯನ್ನೂ ಸಹ ಸಲ್ಲಿಸಲಾಗಿದೆ.

2. ಅರ್ಜಿದಾರರ ಪರ ನ್ಯಾಯವಾದಿ ಮತ್ತು ಎದುರುದಾರರ ಪರ ನ್ಯಾಯವಾದಿಯ ಅಹವಾಲುಗಳನ್ನು ನಾವು ಆಲಿಸಿದ್ದೇವೆ.

3. ಅಧಿನಿಯಮದ 10–ಎ(1)ನೇ ಪ್ರಕರಣವನ್ನು ಅರ್ಥೈಸಲಾಗಿದ್ದು, "ಎರಡು ವರ್ಷಗಳು" ಎಂಬ ಪದಾವಳಿಯನ್ನು 'ಒಂದು ವರ್ಷ' ಎಂಬುದಾಗಿ ಓದಿಕೊಳ್ಳಬೇಕೆಂದು ವಾದಿಸಲು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ***ಸೌಮ್ಯ ಆ್ಯನ್ ಥಾಮಸ್–ವಿರುದ್ಧ–ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು***[1], ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ನಮ್ಮ ಗಮನಕ್ಕೆ ತಂದರು. ಎಲ್ಲಾ ಇತರ ಅಧಿನಿಯಮಗಳಲ್ಲಿ ಎಂದರೆ, ಹಿಂದೂ ವಿವಾಹ ಅಧಿನಿಯಮ, 1955, ಪಾರ್ಸಿ ವಿವಾಹ ಮತ್ತು ವಿಚ್ಛೇದನ ಅಧಿನಿಯಮ, 1936, ವಿಶೇಷ ವಿವಾಹ ಅಧಿನಿಯಮ, 1954 ಈ ಎಲ್ಲಾ ಅಧಿನಿಯಮಗಳಲ್ಲಿ

1. 2010(1) ಕೆಎಲ್‌ಟಿ 869:ಐಎಲ್‌ಆರ್ 2010(1) ಕೇರಳ 805

ಪರಸ್ಪರ ಸಮ್ಮತಿಯಿಂದ ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸುವ ಮುಂಚೆ ಪ್ರತ್ಯೇಕವಾಗಿ ವಾಸಿಸುವ ಅವಧಿಯು 'ಒಂದು ವರ್ಷ' ಎಂದು ಮಾತ್ರವಿದ್ದು, ಈ ಅಧಿನಿಯಮದಲ್ಲಿರುವ "ಎರಡು ವರ್ಷಗಳು" ಎಂಬ ಪದಾವಳಿಯು ಸಂವಿಧಾನದ 14 ಮತ್ತು 21ನೇ ಅನುಚ್ಛೇದಗಳ ಉಲ್ಲಂಘನೆಯಾಗಿತ್ತೆಂದು ಆಕೆಯ ವಾದವಾಗಿತ್ತು. ಆದರೆ ಪ್ರಶ್ನಿತ ಅಧಿನಿಯಮದ ಅಡಿಯಲ್ಲಿ ಇರುವ ಎರಡು ವರ್ಷಗಳ ಅವಧಿಯು ಸದರಿ ಅಧಿನಿಯಮವು ಅನ್ವಯವಾಗುವಂತಹ ವ್ಯಕ್ತಿಗಳ ಮೇಲೆ ತೊಂದರೆಯನ್ನು ಮತ್ತು ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತಿದೆ. 10–ಎ(1) ಪ್ರಕರಣದಲ್ಲಿರುವ 'ಎರಡು ವರ್ಷಗಳು' ಎಂಬ ಅವಧಿಯು ಸಂವಿಧಾನದ 14 ಮತ್ತು 21ನೇ ಅನುಚ್ಛೇಧಗಳನ್ನು ಉಲ್ಲಂಘಿಸಿದೆಯೆಂದು ಮತ್ತು ಅದನ್ನು 'ಒಂದು ವರ್ಷ'ದ ಅವಧಿಯೆಂದಾಗಿ ಅರ್ಥೈಸಿಕೊಳ್ಳಬೇಕೆಂದು ಕೇರಳ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಭಾರತದಾದ್ಯಂತ ಅನ್ವಯವಾಗುವಂತಹ ತೀರ್ಪು ಎಂಬ ಸಂಗತಿಯನ್ನು ಸಹ ಆಕೆ ನಮ್ಮ ಗಮನಕ್ಕೆ ತಂದರು. ಈ ಪ್ರತಿಪಾದನೆಗೆ ಬೆಂಬಲವಾಗಿ ಆಕೆ ***ಕುಸುಮ್ ಇಂಗಾಟ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್ –ವಿರುದ್ಧ– ಯೂನಿಯನ್ ಆಫ್ ಇಂಡಿಯಾ ಮತ್ತು ಇನ್ನೊಬ್ಬರು*[2]**, ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಆಧಾರವಾಗಿರಿಸಿಕೊಂಡರು. ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶದ ವಿರುದ್ಧ ಕೇಂದ್ರ ಸರ್ಕಾರವು ಯಾವುದೇ ಅಪೀಲನ್ನು ಸಲ್ಲಿಸದಿರುವುದು ಒಂದು ಒಪ್ಪಿತವಾದ ಸಂಗತಿಯಾಗಿದೆ.

4. ಆದರೆ, 3ನೇ ಎದುರುದಾರರನ್ನು ಪ್ರತಿನಿಧಿಸಿದ ಮಾನ್ಯ ನ್ಯಾಯವಾದಿಗಳು ವಾದಿಸುತ್ತಾ, ವಿಚ್ಛೇದನದ ಪರಿಕಲ್ಪನೆಯು ಕ್ರಿಶ್ಚಿಯನ್ ಸಮುದಾಯಕ್ಕೆ ಹೊರತಾದುದಾಗಿದ್ದು, ಆದರೆ ಇಡೀ ಭಾರತಕ್ಕೆ ಅನ್ವಯವಾಗಬಹುದಾದ ಕ್ರೋಢೀಕೃತ ಕಾನೂನನ್ನು ಗಮನದಲ್ಲಿರಿಸಿಕೊಂಡು, ಒಂದು ವರ್ಷ ಮಾಡುವುದರ ಬದಲಾಗಿ, ಪಕ್ಷಕಾರರ 'ಲೋಕಲ್ ಪೆನಟೆನ್ಸಿ (ನಿರ್ಣಾಯಕ ಕಾರ್ಯಕ್ರಮವನ್ನು ಅನುಸರಿಸುವುದಕ್ಕೆ ಮುಂಚೆ ತನ್ನ ನಿಲುವಿನಿಂದ ಹಿಮ್ಮರಳಲು (ವ್ಯಕ್ತಿಗೆ) ಕೊಡುವ ಅವಕಾಶ)

2. ಎಐಆರ್ 2004 ಎಸ್‌ಸಿ 2321

ಯನ್ನು ಮನಸ್ಸಿನಲ್ಲಿಟ್ಟುಕೊಂಡು ಎರಡು ವರ್ಷಗಳ ಪ್ರತ್ಯೇಕ ವಾಸದ ಅವಧಿಗೆ ಬೆಂಬಲಿಸಲಾಗುವುದೆಂದು ಹೇಳಿದರು.

5. 4ನೇ ಎದುರುದಾರರನ್ನು ಪ್ರತಿನಿಧಿಸಿದ ನ್ಯಾಯಾಲಯದ ಸಲಹೆಗಾರರು (ಅಮಿಕಸ್ ಕ್ಯೂರಿ), ವಿಚ್ಛೇದನದ ವಿಷಯದಲ್ಲಿ ಕ್ರೋಢೀಕೃತ ಕಾನೂನನ್ನು ಅನುಸರಿಸುವ ಪ್ರೊಟೆಸ್ಟೆಂಟ್ ಚರ್ಚ್‌ನನ್ನು ಪ್ರತಿನಿಧಿಸುವುದಾಗಿ ತಿಳಿಸಿದರು.

6. ಮಹಿಳಾ ಯೋಗಕ್ಷೇಮಕ್ಕಾಗಿ ಕಾರ್ಯನಿರ್ವಹಿಸುವ ಸರ್ಕಾರೇತರ ಸಂಸ್ಥೆಯಾದ 5ನೇ ಎದುರುದಾರರು ಅರ್ಜಿದಾರರನ್ನು ಬೆಂಬಲಿಸಿದರು.

7. ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿ ಮತ್ತು ***ಸೌಮ್ಯ ಆ್ಯನ್ ಥಾಮಸ್*** ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಹಾಗೂ ***ಕುಸುಮ್ ಇಂಗಾಟ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಪರಿಶೀಲಿಸಿದ ಮೇಲೆ, ಅಧಿನಿಯಮದ 10–ಎ(1) ಪ್ರಕರಣವು ಸಂವಿಧಾನದ 14 ಮತ್ತು 21ನೇ ಅನುಚ್ಛೇದಗಳ ಉಲ್ಲಂಘನೆಯಾಗಿದ್ದು, ಅದು ಅಸಂವಿಧಾನಾತ್ಮಕವಾದುದಾಗಿದೆಯೆಂದು ನಿರ್ಣಯಿಸಿರುವುದನ್ನೇ ಇಲ್ಲಿ ಮುಖ್ಯವಾಗಿ ಒತ್ತು ನೀಡಲಾಗಿದೆ. ಆದರೆ, ಅಸಂವಿಧಾನಾತ್ಮಕತೆಯ ಕುಣಿಕೆಯಿಂದ ಅದನ್ನು ಉಳಿಸಲು ಅಧಿನಿಯಮದ 10–ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ 'ಎರಡು ವರ್ಷಗಳು' ಎಂಬ ಪದಾವಳಿಯನ್ನು 'ಒಂದು ವರ್ಷ' ವೆಂದು ಅರ್ಥೈಸಲಾಗಿದೆ. ಕೇಂದ್ರ ಅಧಿನಿಯಮದ ಉಪಬಂಧದ ಸಂವಿಧಾನಾತ್ಮಕತೆಯ ಬಗ್ಗೆ ಕೇರಳ ಉಚ್ಚ ನ್ಯಾಯಾಲಯದ ಘೋಷಣೆಯು ಇಡೀ ಭಾರತದಾದ್ಯಂತ ಅನ್ವಯವಾಗುತ್ತದೆ. ಇದನ್ನು ***ಕುಸುಮ್ ಇಂಗಾಟ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್*** ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸಂಸದೀಯ ಅಧಿನಿಯಮದ ಸಂವಿಧಾನಾತ್ಮಕತೆಯನ್ನು ಸಂವಿಧಾನದ 226ನೇ ಅನುಚ್ಛೇದದ (2)ನೇ ಖಂಡದಲ್ಲಿ ಒಳಗೊಂಡಿರುವ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಶ್ನಿಸಿದ ರಿಟ್ ಅರ್ಜಿಯ ಕುರಿತಾಗಿ ಹೊರಡಿಸಲಾದ

ಆದೇಶವು, ಅದು ಅಂತಿಮವಾದುದಾಗಿರಲಿ ಅಥವಾ ಮಧ್ಯಂತರವಾದುದಾಗಿರಲಿ, ಅಧಿನಿಯಮದ ಅನ್ವಯಿಕೆಯ ಅವಧಿಗೊಳಪಟ್ಟು ಭಾರತದ ಒಕ್ಕೂಟದಾದ್ಯಂತ ಪರಿಣಾಮವನ್ನು ಹೊಂದಿರುತ್ತದೆಂದು ಸ್ಪಷ್ಟಪಡಿಸಿದೆ. ವಿಷಯದ ಈ ಹಿನ್ನೆಲೆಯಲ್ಲಿ, ಅಧಿನಿಯಮದ 10–ಎ ಪ್ರಕರಣದ (1)ನೇ ಉಪಪ್ರಕರಣದ ಸಂವಿಧಾನಾತ್ಮಕತೆ ಅಥವಾ ಅನ್ಯಥಾ ತೀರ್ಮಾನಿಸುವುದಕ್ಕೆ ಸಂಬಂಧಿಸಿದಂತೆ ಈ ರಿಟ್ ಅರ್ಜಿಯು ಯಾವುದೇ ನಿರ್ದಿಷ್ಟ ಆದೇಶಗಳನ್ನು ಕೋರಿಲ್ಲ. ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಘೋಷಣೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಅದನ್ನು ***ಕುಸುಮ್ ಇಂಗಾಟ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್*** ಸಂದರ್ಭದಲ್ಲಿ ಪರಾಮರ್ಶಿಸಿ, ಅಧಿನಿಯಮದ 10–ಎ ಪ್ರಕರಣದ (1)ನೇ ಉಪಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನಿನ ಅಭಿಪ್ರಾಯವು ಈಗ ವಿಶೇಷವಾಗಿ ಕರ್ನಾಟಕ ರಾಜ್ಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಸ್ಪಷ್ಟವಾಗಿದೆ.

8. ಮೇಲೆ ತಿಳಿಸಿದ ನಿರ್ಣಯಗಳೊಂದಿಗೆ, ರಿಟ್ ಅರ್ಜಿಯನ್ನು ವಿಲೇ ಮಾಡಲಾಗಿದೆ.